

ನತದೃಷ್ಟ ಬೌಲರ್‌ಗಳ ನಡುವಣ ಬೆಳ್ಳಿಗೆರೆ ಜಸ್‌ಪ್ರೀತ್ ಬೂಮ್ರಾ

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 2024ರಲ್ಲಿ ಬೌಲರ್‌ಗಳು ಶಾಖಾಘಾತದ ಬೆವರಿನ ಜೊತೆಗೆ ಬ್ಯಾಟರ್‌ಗಳು ಮುಟ್ಟಿಸುತ್ತಿರುವ ಬಿಸಿಯಿಂದಲೂ ತತ್ತರಿಸಿ ಹೋಗಿದ್ದಾರೆ. ಅಲ್ಲೊಬ್ಬ ಬೂಮ್ರಾ, ಇಲ್ಲೊಬ್ಬ ಚಾಹಲ್ ತರಹದವರು ಬಿಟ್ಟರೆ ಮಿಕ್ಕ ಬೌಲರ್‌ಗಳ ಹಣೆಗಳಲ್ಲಿ ಚಿಂತೆಯ ನೆರಿಗೆ. ಬ್ಯಾಟರ್‌ಗಳಿಗೆ ಪೂರಕವಾದ ಚುಟುಕು ಕ್ರಿಕೆಟ್‌ನಲ್ಲಿ ಬೌಲರ್‌ಗಳಿಗೂ ನೆರವಾಗುವ ಬದಲಾವಣೆಗಳಂತೂ ಬೇಕಿದೆ.

■ ವಿಶಾಖ ಎನ್.

# ಸಿಕ್ಸರ್‌ಗಳ ಸುರಿಮಳೆ, ಬೌಲರ್‌ಗಳಿಗೆ ಬರೆ



2024ರ ಇಂಡಿಯನ್ ಪ್ರೀಮಿಯರ್ ಲೀಗ್‌ನ (ಐಪಿಎಲ್) 38 ಪಂದ್ಯಗಳಲ್ಲಿ 666 ಸಿಕ್ಸರ್‌ಗಳು ಮೂಡಿಬಂದ ಮೇಲೆ ರವಿಚಂದ್ರನ್ ಅಶ್ವಿನ್, 'ಬೌಲರ್‌ಗಳನ್ನು ದೇವರೇ ಕಾಪಾಡಬೇಕು' ಎಂಬರ್ಥದಲ್ಲಿ ಪ್ರತಿಕ್ರಿಯೆ ಕೊಟ್ಟರು. ಕಳೆದ ಐಪಿಎಲ್ ಋತುವಿನಲ್ಲಿ 1,124 ಸಿಕ್ಸರ್‌ಗಳು ಮೂಡಿಬಂದಿದ್ದವು. ಈ ಸಲ ಆ ದಾಖಲೆ ಪುಡಿಗಟ್ಟುವುದು ಖರೆ ಎನ್ನುವ ಲೆಕ್ಕಾಚಾರವಿದೆ.

2013ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) 263 ರನ್ ಕಲೆಹಾಕಿದ್ದು ಇದುವರೆಗಿನ ದಾಖಲೆ ಸ್ಕೋರ್ ಆಗಿತ್ತು. ಈ ಸಲ ಐಪಿಎಲ್‌ನಲ್ಲಿ ನಾಲ್ಕು ಸಲ ಅದನ್ನು ಮೊದಲ ಹಂತದಲ್ಲೇ ತಂಡಗಳು ದಾಟಿರುವುದು ಬೌಲರ್‌ಗಳ ಚಿಂತಾಜನಕ ಸ್ಥಿತಿಯ ಮೇಲೆ ಬೆಳಕು ಬೀರುತ್ತದೆ. ಅದರಲ್ಲೂ ಸನ್‌ರೈಸರ್ಸ್ ಹೈದರಾಬಾದ್ ತಂಡವೊಂದೇ ಮೂರು ಸಲ ಆ ಸ್ಕೋರ್‌ನ ಗಡಿಯನ್ನು ಮೊದಲ ಕೆಲವು ಪಂದ್ಯಗಳಲ್ಲೇ ದಾಟಿದ್ದು ನೋಡಿ ಎದುರಾಳಿ ತಂಡಗಳ ಅಭಿಮಾನಿಗಳೂ ಕಂಗಾಲಾದರು.

'ಬೌಂಡರಿ ಗೆರೆಯನ್ನು ಇನ್ನಷ್ಟು ದೂರವಿಟ್ಟು, ಬೌಲರ್‌ಗಳನ್ನು ಕಾಪಾಡಿ' ಎಂದು ಸುನೀಲ್ ಗಾವಸ್ಕರ್ ಸಲಹೆ ಕೊಟ್ಟಿದ್ದಾರೆ. ಕೂಕಬುರಾ ಚೆಂಡಿನ ಬಳಕೆಯಲ್ಲಿ ಬದಲಾವಣೆ ತಂದರೆ, ಚುಟುಕು ಕ್ರಿಕೆಟ್‌ನಲ್ಲಿ ಬೌಲರ್‌ಗಳು ವಿವಿಧ ಹಂತಗಳಲ್ಲಿ ಸ್ವಿಂಗ್ ಮೂಡಿಸಲು ಸಾಧ್ಯವಿದೆ ಎನ್ನುವ ಸಲಹೆ ಕೊಟ್ಟವರು ಮಾಜಿ ಕ್ರಿಕೆಟರ್ ಗೌತಮ್ ಗಂಭೀರ್ ಹಾಗೂ ವೀಕ್ಷಕ ವಿವರಣೆಗಾರ ಹರ್ಷ ಭೋಗ್ಲೆ. ಇಂತಹ ಯಾವುದಾದರೂ ಪರಿಹಾರ ಬೌಲರ್‌ಗಳಿಗೆ ಈಗ ಅಗತ್ಯವಿದೆ.

ಕಡಿಮೆ ದೂರದ ಬೌಂಡರಿ, ಸಪಾಟು ಪಿಚ್‌ಗಳು, ಇಂಪ್ಯಾಕ್ಟ್ ಆಟಗಾರರನ್ನು ಆಡಿಸುವ ಅವಕಾಶ– ಇವೆಲ್ಲವುಗಳಿಂದಾಗಿ ಚುಟುಕು ಕ್ರಿಕೆಟ್‌ನ ಜಾಯಮಾನ ಸಂಪೂರ್ಣ ಬದಲಾಗಿದೆ. ಬ್ಯಾಟರ್‌ಗಳಿಗೆ ಸಿಗುತ್ತಿರುವಷ್ಟು ಬೆಂಬಲ ಬೌಲರ್‌ಗಳಿಗೆ ಸಿಗುತ್ತಿಲ್ಲ.

ಗುಜರಾತ್ ಟೈಟನ್ಸ್ ತಂಡದ ವಿರುದ್ಧ ಆರ್‌ಸಿಬಿ ಆಡಿದ ಪಂದ್ಯವನ್ನು ನೆನಪಿಸಿಕೊಳ್ಳೋಣ. ಆ ಪಂದ್ಯದಲ್ಲಿ ಇಂಗ್ಲೆಂಡ್‌ನ ವಿಲ್‌ಜಾಕ್ಸ್ 50ರಿಂದ 100 ರನ್‌ಗಳ ಗಡಿಯನ್ನು ಬರೀ

ಬೌಲರ್‌ಗಳನ್ನು ರಕ್ಷಿಸಿ: ರವಿಚಂದ್ರನ್ ಅಶ್ವಿನ್ ಹತಾಶೆ